

# ಬ್ಯಾಡ್ಮಿಂಟನ್ ಅಂಗಳದ ಹೊಸ ಸಂಚಲನ ಲಕ್ಷ್ಯ ಸೇನ್

**ಕಳೆದ ಐದು ವರ್ಷಗಳಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹತ್ತು ಪದಕಗಳನ್ನು ಜಯಿಸಿರುವ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್, ಕೆನಡಾ ಟೂರ್ನಿಯಲ್ಲೀಗ ಪದಕದ ಹೊಳಪು ಮೂಡಿಸಿದ್ದಾರೆ. ಆರೇಳು ತಿಂಗಳು ಅನುಭವಿಸಿದ ನೋವುಗಳಿಗೆ ಮತ್ತು ಮುಂದಿನ ಟೂರ್ನಿಗಳಲ್ಲಿ ಪದಕ ಜಯಿಸಲು ಈಗಿನ ಸಾಧನೆ 'ಬೂಸ್ಟರ್ ಡೋಸ್'ನಂತಿದೆ.**

■ ಪ್ರಮೋದ

'ಸ್ಪರ್ಧಾತ್ಮಕ ಜಗತ್ತಿನ ವಿಶ್ವ ವೇದಿಕೆಯಲ್ಲಿ ಪ್ರಗಮನ ಸೆಳೆಯುವ ರೀತಿಯಲ್ಲಿ ಸಾಧನೆ ಮಾಡುವುದು ಸುಲಭವಲ್ಲ. ಅದರಲ್ಲಿಯೂ ಲಕ್ಷ್ಯ ಸೇನ್‌ನಂಥ ಯುವ ಪ್ರತಿಭಾನ್ವಿತ ಆಟಗಾರರಿಗೆ ಅನೇಕ ಸವಾಲುಗಳು ಎದುರಾಗುವುದು ನಿಶ್ಚಿತ. ಇಂಥ ಸಂದರ್ಭವನ್ನು ದಿಟ್ಟವಾಗಿ ಎದುರಿಸಿದಾಗಲೇ ದೊಡ್ಡ ಸಾಧನೆ ಸಾಧ್ಯ'.

2022ರ 'ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ'ಯ ಫೈನಲ್‌ನಲ್ಲಿ ಲಕ್ಷ್ಯ ಸೇನ್ ಸೋತಾಗ ಬ್ಯಾಡ್ಮಿಂಟನ್ ದಿಗ್ಗಜ ಪ್ರಕಾಶ ಪಡುಕೋಣೆ ಅವರು ನೀಡಿದ್ದ ಪ್ರತಿಕ್ರಿಯೆ ಇದು. ಈ ಟೂರ್ನಿಯಲ್ಲಿ ಸ್ಪರ್ಧೆ ಮಾಡಿದಾಗ ಲಕ್ಷ್ಯ ವಯಸ್ಸು 20 ವರ್ಷ! ಸಣ್ಣ ವಯಸ್ಸಿನಲ್ಲಿ ಆಲ್ ಇಂಗ್ಲೆಂಡ್‌ನಂಥ ಪ್ರತಿಷ್ಠಿತ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದ್ದ ಭಾರತದ ಆಟಗಾರನ ಬಗ್ಗೆ ಪ್ರಕಾಶ ಪಡುಕೋಣೆ ಅವರು ಮೆಚ್ಚುಗೆಯ ಮಾತುಗಳನ್ನಾಡಿದ್ದರೂ, ಕ್ರಮಿಸಬೇಕಾದ ಮುಂದಿನ ಹಾದಿ ಬಗ್ಗೆ ಎಚ್ಚರಿಕೆಯನ್ನೂ ನೀಡಿದ್ದರು.

ಆಲ್ ಇಂಗ್ಲೆಂಡ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಪ್ರಕಾಶ ಪಡುಕೋಣೆ (1980) ಮತ್ತು ಪುಲ್ಲೇಲ ಗೋಪಿಚಂದ್ (2011) ಚಾಂಪಿಯನ್ ಆಗಿದ್ದರು. ಪ್ರಕಾಶನಾಥ್ (1947), ಪ್ರಕಾಶ ಪಡುಕೋಣೆ (1981), ಸೈನಾ ನೆಹ್ವಾಲ್ (2015) ರನ್ನರ್ ಅಪ್ ಸ್ಥಾನ ಪಡೆದಿದ್ದರು. ಕಳೆದ ವರ್ಷ ಲಕ್ಷ್ಯ ಸೇನ್ ಕೂಡ ರನ್ನರ್ ಅಪ್ ಸ್ಥಾನ ಗಳಿಸಿದ ಬಳಿಕ ಅವರ ಭವಿಷ್ಯದ ಸಾಧನೆಗಳ ಬಗ್ಗೆ ದೊಡ್ಡ ನಿರೀಕ್ಷೆಗಳು ಗರಿಗೆದರಿದ್ದವು.

ಲಕ್ಷ್ಯ ಸೇನ್ ಹೆಸರು ಜೂನಿಯರ್ ಹಾಗೂ ಸೀನಿಯರ್ ಹಂತದ ಬ್ಯಾಡ್ಮಿಂಟನ್ ಟೂರ್ನಿಗಳಲ್ಲಿ ಪ್ರಮುಖವಾಗಿ ಕೇಳಿಬರುತ್ತಿದೆ. ಜೂನಿಯರ್ ವಿಭಾಗದಿಂದ ಪದಕ ಹಾಗೂ ಪ್ರಶಸ್ತಿಗಳ ಬೇಟೆಯಾಡುತ್ತಿರುವ ಯುವ ಪ್ರತಿಭೆ ಲಕ್ಷ್ಯ ಸೇನ್ ಅಪ್ಪ ಹಾಗೂ ಬ್ಯಾಡ್ಮಿಂಟನ್ ಕೋಚ್ ಡಿ.ಕೆ. ಸೇನ್ ಅವರಂತೆ ದೊಡ್ಡ ಸಾಧನೆಯ ಭರವಸೆ ಮೂಡಿಸುತ್ತಿದ್ದಾರೆ. ಮಾರ್ಗದರ್ಶನ ಮಾಡಿದ ಪ್ರಕಾಶ ಪಡುಕೋಣೆ ಅವರ ಅಕಾಡೆಮಿಯಲ್ಲಿ ಪಳಗಿ ಪಡುಕೋಣೆ ಅವರ ಜೂನಿಯರ್ ಹಂತದ ದಾಖಲೆಯನ್ನೂ ಮೀರಿ ಲಕ್ಷ್ಯ ಸೇನ್ ಯಶಸ್ಸಿನ ಓಟಗಳನ್ನು ಮುನ್ನಡೆಸುತ್ತಿದ್ದಾರೆ.

ಲಕ್ಷ್ಯ ಸೇನ್ ಪ್ರತಿಕೂಲ ಪರಿಸ್ಥಿತಿಯ ನಡುವೆಯೂ ಇತ್ತೀಚೆಗೆ 'ಕೆನಡಾ ಓಪನ್ ಸೂಪರ್ 500' ಪ್ರಶಸ್ತಿ ಜಯಿಸಿದ್ದಾರೆ. ಹೋದ ವರ್ಷ ಅವರು ಮೂಗಿನ ಶಸ್ತ್ರಚಿಕಿತ್ಸೆಗೊಳಗಾಗಿ ಚೇತರಿಸಿಕೊಳ್ಳಲು ಎಂಟು ತಿಂಗಳು ಹಿಡಿದಿತ್ತು. ಫಿಟ್‌ನೆಸ್ ಹಾಗೂ ಅಭ್ಯಾಸದ ಕೊರತೆ ಆಟದ ಮೇಲೆ ಪರಿಣಾಮ ಬೀರಿತು. ಪ್ರಸಕ್ತ ಋತುವಿನಲ್ಲಿ ಆಡಿದ ನಾಲ್ಕು ಟೂರ್ನಿಗಳಲ್ಲಿ ಗೆಲುವು ದೂರದ ಬೆಟ್ಟವಾಗಿತ್ತು. ಇದು ರ‍್ಯಾಂಕಿಂಗ್ ಮೇಲೆ ಪರಿಣಾಮ ಬೀರಿ 25ನೇ ಸ್ಥಾನಕ್ಕೆ ಕುಸಿದಿತ್ತು. ಕೆಲ ವರ್ಷಗಳ ಹಿಂದೆ ವಯಸ್ಸಿನ ನಕಲಿ ದಾಖಲೆ ಕುರಿತು ತನಿಖೆ ನಡೆದಿದ್ದ ಘಟನೆ ಮಾನಸಿಕವಾಗಿ ಅವರನ್ನು ಕುಗ್ಗಿಸಿತ್ತು.

ಇನ್ನೆರಡು ತಿಂಗಳು ಕಳೆದರೆ ಚೀನಾದಲ್ಲಿ 'ಏಷ್ಯನ್ ಗೇಮ್ಸ್' ನಡೆಯಲಿದೆ. ಮುಂದಿನ ವರ್ಷ ಪ್ಯಾರಿಸ್‌ನಲ್ಲಿ ಜಗತ್ತಿನ ಶ್ರೇಷ್ಠ ಕ್ರೀಡಾಕೂಟಗಳಲ್ಲಿ ಅಗ್ರಸ್ಥಾನದಲ್ಲಿರುವ ಒಲಿಂಪಿಕ್ಸ್ ಜರುಗಲಿದೆ. ಹೀಗಾಗಿ ಕ್ರೀಡಾಪಟುಗಳಿಗೆ ಈ ವರ್ಷ ನಡೆಯುವ

